## **ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,** ದೇವದುರ್ಗ.

ಉಪಸ್ಥಿತರು ಃ **ಶ್ರೀ ರಫೀಕ್ ಅಹಮದ್., ಬಿಎ., ಎಲ್.ಎಲ್.ಬಿ.,**
**ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
ದೇವದುರ್ಗ.

**ದಿನಾಂಕ ಃ 26ನೇ ಮಾರ್ಚ್ 2026**

**ಕ್ರಿಮಿನಲ್. ಮಿಸ್. ನಂ.106/2024**

**ಅರ್ಜಿದಾರರು ಃ**

1. ಶ್ರೀಮತಿ ನಾಜೀಯ ಬೇಗಂ ಗಂಡ ಬಾಬು,
ವಯಸ್ಸುಃ **36** ವರ್ಷ, ಉಃ ಮನೆಕೆಲಸ,

2. ತಸಿಮೀಯ ತಂದೆ ಬಾಬು, **09** ವರ್ಷ, ಉಃ ವಿದ್ಯಾರ್ಥಿ,

3. ಹಾಜಿ ಇಬ್ರಹಿಂ ತಂದೆ ಬಾಬು, **08** ವರ್ಷ,
ಉಃ ವಿದ್ಯಾರ್ಥಿ, ಎಲ್ಲರೂ ಸಾಃ ಅಬ್ಬು ಮೋಹಲ್ಲಾ ಓಣಿ,
ಹೊಸಃ ಗೌರಂಪೇಟೆ ದೇವದುರ್ಗ, ತಾಃ ದೇವದುರ್ಗ,
ಜಿಃ ರಾಯಚೂರು.

(ಅರ್ಜಿದಾರರ ಪರ ಶ್ರೀ. ಎ.ಟಿ.ಬಿ., ವಕೀಲರು)

**- ವಿರುದ್ಧ -**

**ಎದುರುದಾರರು ಃ**

ಬಾಬು ತಂದೆ ಮಹಿಬೂಬ ಅಲಿ ಸಾಬ, ವಯಸ್ಸುಃ **41** ವರ್ಷ, ಉಃ ಚಾಲಕ, ಸಾಃ ಅಬ್ಬು ಮೋಹಲ್ಲಾ ಓಣಿ, ದೇವದುರ್ಗ, ತಾಃ ದೇವದುರ್ಗ, ಜಿಃ ರಾಯಚೂರು.

(ಎದುರುದಾರರ ಪರ ಶ್ರೀ.ಬಿ.ಎಸ್., ವಕೀಲರು)

### **ಃಃ ಆದೇಶ ಃಃ**

ಅರ್ಜಿದಾರರು, ಎದುರುದಾರರ ವಿರುದ್ಧ ದಂ.ಪ್ರ.ಸಂ.ಕಲಂ. **125** ರಡಿಯಲ್ಲಿ ಅರ್ಜಿ ಸಲ್ಲಿಸಿ ಎದುರುದಾರರು ಅರ್ಜಿದಾರರ ಉಪ ಜೀವನಕ್ಕಾಗಿ ತಿಂಗಳಿಗೆ ಒಟ್ಟು ರೂ.**20,000/-** ಗಳನ್ನು ಮಾಸಿಕ ಜೀವನಾಂಶವಾಗಿ ನೀಡಲು ಆದೇಶಿಸುವಂತೆ ಕೋರಿರುತ್ತಾರೆ.

**2.** **ಅರ್ಜಿಯ ಸಂಕ್ಷಿಪ್ತ ಸಾರಾಂಶ ಏನೆಂದರೆ ಃ-**

**1**ನೇ ಅರ್ಜಿದಾರಳು ಎದುರುದಾರನ ದರ್ಮಪತ್ನಿಯಾಗಿದ್ದು, **1**ನೇ ಅರ್ಜಿದಾರರು ಮತ್ತು ಎದುರದಾರನ ನಡುವಿನ ವಿವಾಹವು ಸುಮಾರು **15** ವರ್ಷಗಳ ಹಿಂದೆ ಅರ್ಜಿದಾರರು ಗೌರಂಪೇಟೆಯವರ

ಮನೆಯ ಮುಂದೆ ಗ್ರಾಮದ ಹಿರಿಯರು ಮತ್ತು ಮುಸ್ಲಿಂ ಸಮುದಾಯದ ವೇಷಭೂಷಣಗಳ ಸಮ್ಮುಖದಲ್ಲಿ ನಡೆಯಿತು. 1ನೇ ಅರ್ಜಿದಾರರ ಪೋಷಕರು ಎದುರುದಾರನಿಗೆ ಒಂದು ತೊಲ ಚಿನ್ನದ ಆಭರಣ, ರೂ.50,000/- ನಗದು ಮತ್ತು ಇತರ ಮೌಲ್ಯಯುತ ವಸ್ತುಗಳನ್ನು ನೀಡಿರುತ್ತಾರೆ. ಎದುರುದಾರನು 1ನೇ ಅರ್ಜಿದಾರರ ಜೊತೆ 8 ವರ್ಷಗಳ ಕಾಲ ಸಂತೋಷದ ದಾಂಪತ್ಯ ಜೀವನವನ್ನು ನಡೆಸಿರುತ್ತಾನೆ, 2 ಮತ್ತು 3ನೇ ಅರ್ಜಿದಾರರ ಜನನದ ನಂತರ, ಎದುರುದಾರನು 1ನೇ ಅರ್ಜಿದಾರರ ಜೊತೆ ಜಗಳವಾಡಲು ಪ್ರಾರಂಭಿಸಿರುತ್ತಾನೆ ಮತ್ತು ಎರಡನೇ ಮದುವೆ ಮಾಡಿಕೊಳ್ಳುವ ಉದ್ದೇಶವನ್ನು ವ್ಯಕ್ತಪಡಿಸಿರುತ್ತಾನೆ, ಇದಕ್ಕಾಗಿ 1ನೇ ಅರ್ಜಿದಾರರ ಆಕ್ಷೇಪಿಸಿದ್ದು, ನಂತರ ಎದುರುದಾರನ್ನು ಮದ್ಯಪಾನ ಮತ್ತು ಜೂಜಾಟದಂತಹ ಕೆಟ್ಟ ಅಭ್ಯಾಸಗಳಿಗೆ ವ್ಯಸನಿಯಾಗಿರುತ್ತಾನೆ, ಎದುರುದಾರನು 1ನೇ ಅರ್ಜಿದಾರರನ್ನು ಅವರ ಮನೆಯಲ್ಲಿ ಹೊಡೆಯುವ ಮೂಲಕ ಮತ್ತು ಅರ್ಜಿದಾರರನ್ನು ನೋಡದೆ ಎದುರುದಾರನು ಕುಡಿದ ಸ್ಥಿತಿಯಲ್ಲಿ 1ನೇ ಅರ್ಜಿದಾರರನ್ನು ಅಸಹ್ಯಕರ ಭಾಷೆಯಲ್ಲಿ ನಿಂದಿಸಲು ಪ್ರಾರಂಭಿಸಿರುತ್ತಾನೆ ಮತ್ತು ಅರ್ಜಿದಾರರಿಗೆ ಯಾವುದೇ ಕಾರಣವಿಲ್ಲದೆ ಮಾನವೀಯವಾಗಿ ಹಲವು ಬಾರಿ ಹಲ್ಲೆ ನಡೆಸಿರುತ್ತಾನೆ ಮತ್ತು ಕಿರುಕುಳ ನೀಡಲು ಪ್ರಾರಂಭಿಸಿರುತ್ತಾನೆ, 1ನೇ ಅರ್ಜಿದಾರಳು ಎಲ್ಲಾ ಕಿರುಕುಳವನ್ನು 4 ವರ್ಷಗಳ ಕಾಲ ಸಹಿಸಿಕೊಂಡರು ಮತ್ತು ಒಂದು ದಿನ ಅಥವಾ ಇನ್ನೊಂದು ದಿನ ಎದುರುದಾರನು ತನ್ನ ಮನೋಭಾವವನ್ನು ಬದಲಾಯಿಸಬಹುದು ಮತ್ತು ಎದುರುದಾರನು ತನ್ನ ವರ್ತನೆಗಳನ್ನು ಎಂದಿಗೂ ಬದಲಾಯಿಸುವುದಾಗಿ ನಂಬಿಕೆಯ ಮೇಲೆ 1ನೇ ಅರ್ಜಿದಾರರು ಎದುರುದಾರನನ್ನು ಜೀವನ ನಡೆಸಿತ್ತುದ್ದಳು. ಅರ್ಜಿದಾರರು ಎದುರುದಾರನೊಂದಿಗೆ ಮತ್ತೆ ಸೇರಲು ಹಲವಾರು ಬಾರಿ ವಿನಂತಿಸಿರುತ್ತಾನೆ, ಆದರೆ ಎದುರುದಾರನು ಅರ್ಜಿದಾರರಿಗೆ ನಿರ್ಲಕ್ಷ್ಯ ವಹಿಸಿರುತ್ತಾನೆ. ನಂತರ 1ನೇ ಅರ್ಜಿದಾರರು "ಶಾಂತ್ವನ ಮಹಿಳಾ ಸಹಾಯ ವಾಣಿ ಕೇಂದ್ರ ದೇವದುರ್ಗಾ" ರವರಿಗೆ ದಿನಾಂಕ 07-06-2021 ರಂದು ಎದುರುದಾರನು ತನ್ನೊಂದಿಗೆ ಹಾಜರಿರುವ ಬಗ್ಗೆ ದೂರು ನೀಡಿದ್ದಾರೆ. ಕುಟುಂಬ ಸಲಹೆಗಾರರಾದ ಶಾಂತವಾನ ಮಹಿಳಾ ಸಹಾಯ ವಾಣಿ ಕೇಂದ್ರ ದೇವದುರ್ಗ ಅವರ ಸಮ್ಮುಖದಲ್ಲಿ,

ಎದುರುದಾರನು ದಿನಾಂಕ **12-06-2021** ರಂದು ಸಾಕ್ಷಿಗಳ ಸಮ್ಮುಖದಲ್ಲಿ ಅರ್ಜಿದಾರರಿಗೆ ರೂ.**9,000/-** ಜೀವನಾಂಶವನ್ನು ನೀಡಲು ಒಪ್ಪಿಕೊಂಡಿರುತ್ತಾನೆ. ಆದರೆ ಇಂದಿನವರೆಗೆ ಎದುರುದಾರನು ಅರ್ಜಿದಾರರಿಗೆ ಯಾವುದೇ ಮೊತ್ತವನ್ನು ಪಾವತಿಸಿಲ್ಲ. ಅರ್ಜಿದಾರರು ಮತ್ತೆ ಸೇರಲು ಮತ್ತು ಎದುರುದಾರನೊಂದಿಗೆ ವಾಸಿಸಲು ಸಿದ್ಧರಿದ್ದರೂ ಸಹ, ಒಪ್ಪಂದದ ಪ್ರಮಾಣೀಕೃತ ಪ್ರತಿಯನ್ನು ಗೌರವಾನ್ವಿತ ನ್ಯಾಯಾಲಯದ ಪರಿಶೀಲನೆಗಾಗಿ ಇಲ್ಲಿ ಲಗತ್ತಿಸಲಾಗಿದೆ. ಎದುರುದಾರನು ಈಗಾಗಲೇ **2** ನೇ ಮದುವೆಯಾಗಿದ್ದಾರೆ ಎಂಬ ಅಂಶವನ್ನು **1** ನೇ ಅರ್ಜಿದಾರರ ತಿಳಿದಿದ್ದು, ಆಕೆಯ ಪೋಷಕರು ಎರಡನೇ ಮದುವೆಯ ಬಗ್ಗೆ ಎದುರುದಾರನ್ನು ಕೇಳಿದ್ದು, ಆದರೆ ಎದುರುದಾರನನ್ನು ನಿರ್ಲಕ್ಷಿಸಿರುತ್ತಾನೆ ಮತ್ತು ಕಾಳಜಿ ವಹಿರುವುದಿಲ್ಲ, ಆದ್ದರಿಂದ ಯಾವುದೇ ಪರಿಹಾರವಿಲ್ಲದೆ ಅವರ ಜೀವನ ನಿರ್ವಹಣೆಗಾಗಿ ಈ ಗೌರವಾನ್ವಿತ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ. ದಿನಾಂಕ **12-06-2021** ರಿಂದ ಅರ್ಜಿದಾರರು ಪೋಷಕರ ಮನೆಯಲ್ಲಿ ವಾಸಿಸುತ್ತಿರುವುದರಿಂದ ಎದುರುದಾರನು ಯಾವುದೇ ಕಾರಣವಿಲ್ಲದೆ ಅರ್ಜಿದಾರರನ್ನು ನಿರ್ಲಕ್ಷಿಸಿದ್ದಾರೆ ಮತ್ತು **1** ನೇ ಅರ್ಜಿದಾರರ ಸ್ವತಃ ನಿರ್ವಹಿಸಲು ಯಾವುದೇ ಕೆಲಸ ಮಾಡುವ ಶಕ್ತಿ ಹೊಂದಿರುವುದಿಲ್ಲ. ಮತ್ತು ಅವರು ನಿರ್ವಹಣೆಯನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ. **1** ನೇ ಅರ್ಜಿದಾರರ ಪೋಷಕರು ಬಡವರಾಗಿದ್ದು, ಯಾವುದೇ ಸ್ಥಿರ ಆಸ್ತಿ ಅಥವಾ ಭೂಮಿ ಅಥವಾ ಜೀವನೋಪಾಯಕ್ಕಾಗಿ ಯಾವುದೇ ಇತರ ಮೂಲಗಳನ್ನು ಹೊಂದಿಲ್ಲ. ಎದುರುದಾರನು ಲಾರಿ ಚಾಲಕನಾಗಿ ಕೆಲಸ ಮಾಡುತ್ತಿದ್ದಾನೆ ಮತ್ತು ಅವರು ತಿಂಗಳಿಗೆ ರೂ. **30,000/-** ಗಳಿಸುತ್ತಿದ್ದಾರೆ. **2** ಮತ್ತು **3** ನೇ ಅರ್ಜಿದಾರರು ಶಾಲೆಗಳಲ್ಲಿ ಓದುತ್ತಿದ್ದಾರೆ, ಶುಲ್ಕ ರೂ.**20,000/-** ವೆಚ್ಚದ ಸಂಪೂರ್ಣ **1** ನೇ ಅರ್ಜಿದಾರರು ಕಟ್ಟಿರುತ್ತಾರೆ. ಎದುರುದಾರನು **1** ನೇ ಅರ್ಜಿದಾರರಿಗೆ ರೂ. **10,000/-** ಮತ್ತು **2** ಮತ್ತು **3** ನೇ ಅರ್ಜಿದಾರರಿಗೆ ಪ್ರತಿ ತಿಂಗಳು ತಲಾ ರೂ. **5,000/-** ಗಳನ್ನು ಪಾವತಿಸಲು ಬಾದ್ಯಸ್ಥದ್ದಾಗಿರುತ್ತಾನೆ. ಆ ಕಾರಣ ಅರ್ಜಿಯನ್ನು ಪುರಸ್ಕರಿಸಲು ಕೋರಿರುತ್ತಾರೆ.

**3.** ಎದುರುದಾರರಿಗೆ ನ್ಯಾಯಾಲಯದಿಂದ ನೋಟೀಸ್ ಜಾರಿಯಾಗಿದ್ದು, ಅವರು ನ್ಯಾಯಾಲಯಕ್ಕೆ ವಕೀಲರ ಮೂಲಕ ಹಾಜರಾಗಿರುತ್ತಾರೆ. ಆದರೆ ತನ್ನ ಪರವಾಗಿ ತಕಾರರು ಸಲ್ಲಿಸಿರುವುದಿಲ್ಲ.

**4.** ಈ ಪ್ರಕರಣವನ್ನು ಸಾಬೀತುಪಡಿಸಲು 1ನೇ ಅರ್ಜಿದಾರರು ಸ್ವತಃ ಪಿಡಬ್ಲೂ-1 ಮತ್ತು ಎರಡು ಸಾಕ್ಷಿದಾರರು ಪಿಡಬ್ಲೂ-2 ಮತ್ತು 3 ಎಂದು ವಿಚಾರಣೆಗೊಳಪಡಿಸಿಕೊಂಡು ನಿಪಿ-1 ರಿಂದ 12 ರಂತೆ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

**5.** ಅರ್ಜಿದಾರರು ಹಾಜರು ಪಡಿಸಿದ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಹಾಗೂ ಪ್ರಕರಣದ ಸಂದರ್ಭಗಳನ್ನು ಅವಲೋಕಿಸಿದಾಗ ಈ ಹಂತದಲ್ಲಿ ತೀರ್ಮಾನಕ್ಕೆ ಉದ್ಭವಿಸುವ ಅಂಶಗಳೇನೆಂದರೆ.

**ಃಃಅಂಶಗಳು ಃಃ**

1. ಎದುರುದಾರರು ಯಾವುದೇ ಸಕಾರಣವಿಲ್ಲದೆ ಅರ್ಜಿದಾರರ ಜೀವನ ನಿರ್ವಾಹಣೆಯನ್ನು ತೊರೆದಿರುತ್ತಾರೆ ಎಂದು ಅರ್ಜಿದಾರರು ಸಾಬೀತುಪಡಿಸುತ್ತಾರೆಯೇ ?
2. ಎದುರುದಾರರು ಅರ್ಜಿಯಲ್ಲಿ ಕೋರಿರುವಂತೆ ಜೀವನಾಂಶ ನೀಡಲು ಆರ್ಥಿಕ ಸಾಮರ್ಥ್ಯ ಹೊಂದಿದ್ದಾರೆ ಎಂದು ಅರ್ಜಿದಾರರು ಸಾಬೀತುಪಡಿಸುತ್ತಾರೆಯೇ ?
3. ಅರ್ಜಿದಾರರು ಅರ್ಜಿಯಲ್ಲಿ ಕೋರಿರುವ ಪರಿಹಾರಕ್ಕೆ ಅರ್ಹರೇ ?
4. ಯಾವ ಆದೇಶ ?

**6.** **ಈ ಮೇಲಿನ ಅಂಶಳಿಗೆ ಉತ್ತರಃ**

ಅಂಶ 1 : ಸಕರಾತ್ಮಕ

ಅಂಶ 2 ಃ ಸಕರಾತ್ಮಕ

ಅಂಶ 3 ಃ ಭಾಗಶಃ ಸಕರಾತ್ಮಕ

ಅಂಶ 4 ಃ ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ.

## ::ಕಾರಣಗಳು ::

**7. ಅಂಶ 1 ಃ-** ಅರ್ಜಿದಾರರು ಈ ಪ್ರಕರಣವನ್ನು ಸಾಭೀತುಪಡಿಸಲು 1 ನೇ ಅರ್ಜಿದಾರರು ಸ್ವತಃ ಪಿಡಬ್ಲೂ.1 ಎಂದು ವಿಚಾರಣೆಗೆ ಒಳಪಟ್ಟು 1 ನೇ ಅರ್ಜಿದಾರಳು ಎದುರುದಾರನ ದರ್ಮಪತ್ನಿಯಾಗಿದ್ದು,

1 ನೇ ಅರ್ಜಿದಾರಳ ಮತ್ತು ಎದುರದಾರನ ವಿವಾಹವು ಸುಮಾರು 15 ವರ್ಷಗಳ ಹಿಂದೆ ಗೌರಂಪೇಟೆಯಲ್ಲಿ ಅವರ ಮನೆಯ ಮುಂದೆ ಗ್ರಾಮದ ಹಿರಿಯರು ಮತ್ತು ಮುಸ್ಲಿಂ ಸಮುದಾಯದ ಪದ್ದತಿಯಂತೆ ಸಮ್ಮುಖದಲ್ಲಿ ನಡೆದಿರುತ್ತದೆ. ಇವರ ವಿವಾಹದ ಕುರಿತು ನಿಪಿ-13 ರಂತೆ ನಿಖಾನಾಮವನ್ನು ಹಾಜರುಪಡಿಸಿರುತ್ತಾರೆ ಮತ್ತು 4 ಆಧಾರ್ ಕಾರ್ಡ್, 1 ಪಡಿತರ ಚೀಟಿ ದೃಢೀಕೃತ ಪ್ರತಿಗಳನ್ನು ನೀಡಿ 1 ರಿಂದ 5 ರಂತೆ ಹಾಜರುಪಡಿಸಿರುತ್ತಾರೆ. ಸದರಿ ದಾಖಲಾತಿಗಳನ್ನು ಪರಿಶೀಲನೆ ಮಾಡಿದಾಗ 1 ನೇ ಅರ್ಜಿದಾರಳು ಎದುರುದಾರನ ಕಾನೂನುಬದ್ಧ ಪತ್ನಿಯಾಗಿರುತ್ತಾರೆ ಮತ್ತು 2 ಮತ್ತು 3 ನೇ ಅರ್ಜಿದಾರರು ಇವರ ಕಾನೂನುಬದ್ಧ ಮಕ್ಕಳಾಗಿರುತ್ತಾರೆ ಎಂದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಮುಂದುವರೆದು ತಮ್ಮ ವಿಚಾರಣೆಯಲ್ಲಿ 1 ನೇ ಅರ್ಜಿದಾರಳ ಪೋಷಕರು ಎದುರುದಾರನಿಗೆ ಒಂದು ತೊಲ ಚಿನ್ನದ ಆಭರಣ, ರೂ.50,000/- ನಗದು ಮತ್ತು ಇತರ ಮೌಲ್ಯಯುತ ವಸ್ತುಗಳನ್ನು ನೀಡಿದ್ದು. ಎದುರುದಾರನು 1 ನೇ ಅರ್ಜಿದಾರರ ಜೊತೆ 8 ವರ್ಷಗಳ ಕಾಲ ಸಂತೋಷದ ದಾಂಪತ್ಯ ಜೀವನವನ್ನು ನಡೆಸಿದ್ದು, 2 ಮತ್ತು 3 ನೇ ಅರ್ಜಿದಾರರ ಜನನದ ನಂತರ, ಎದುರುದಾರನು 1 ನೇ ಅರ್ಜಿದಾರರ ಜೊತೆ ಜಗಳವಾಡಲು ಪ್ರಾರಂಭಿಸಿದ್ದು ಮತ್ತು ಎರಡನೇ ಮದುವೆ ಮಾಡಿಕೊಳ್ಳುವ ಉದ್ದೇಶವನ್ನು ವ್ಯಕ್ತಪಡಿಸಿದ್ದು, ಇದಕ್ಕಾಗಿ 1 ನೇ ಅರ್ಜಿದಾರರ ಆಕ್ಷೇಪಿಸಿದ್ದು, ನಂತರ ಎದುರುದಾರನ್ನು ಮದ್ಯಪಾನ ಮತ್ತು ಜೂಜಾಟದಂತಹ ಕೆಟ್ಟ ಅಭ್ಯಾಸಗಳಿಗೆ ವ್ಯಸನಿಯಾಗಿದ್ದು, ಎದುರುದಾರನು 1 ನೇ ಅರ್ಜಿದಾರರನ್ನು ಅವರ ಮನೆಯಲ್ಲಿ ಹೊಡೆಯುತ್ತಿದ್ದು, ಅರ್ಜಿದಾರರನ್ನು ನೋಡದೆ ಎದುರುದಾರನು ಕುಡಿದ ಸ್ಥಿತಿಯಲ್ಲಿ 1 ನೇ ಅರ್ಜಿದಾರರನ್ನು ಅಸಹ್ಯಕರ ಭಾಷೆಯಲ್ಲಿ ನಿಂದಿಸಲು ಪ್ರಾರಂಭಿಸಿದ್ದು. ಅರ್ಜಿದಾರರಿಗೆ ಯಾವುದೇ ಕಾರಣವಿಲ್ಲದೆ ಮಾನವೀಯವಾಗಿ ಹಲವು ಬಾರಿ ಹಲ್ಲೆ ನಡೆಸಿದ್ದು ಮತ್ತು ಕಿರುಕುಳ ನೀಡಲು ಪ್ರಾರಂಭಿಸಿದ್ದು, 1 ನೇ ಅರ್ಜಿದಾರಳು ಎಲ್ಲಾ ಕಿರುಕುಳವನ್ನು 4 ವರ್ಷಗಳ ಕಾಲ ಸಹಿಸಿಕೊಂಡಿದ್ದು ಒಂದು ದಿನ ಅಥವಾ ಇನ್ನೊಂದು ದಿನ ಎದುರುದಾರನು ತನ್ನ ಮನೋಭಾವವನ್ನು ಬದಲಾಯಿಸಬಹುದು ಮತ್ತು ಎದುರುದಾರನು ತನ್ನ ವರ್ತನೆಗಳನ್ನು ಎಂದದಾರು ಬದಲಾಯಿಸುವುದಾಗಿ ನಂಬಿಕೆಯ ಮೇಲೆ 1 ನೇ ಅರ್ಜಿದಾರರು ಎದುರುದಾರನೊಂದಿಗೆ ಜೀವನ ನಡೆಸಿದ್ದು.

ಅರ್ಜಿದಾರರು ಎದುರುದಾರನೊಂದಿಗೆ ಮತ್ತೆ ಸೇರಲು ಹಲವಾರು ಬಾರಿ ವಿನಂತಿಸಿರುತ್ತಾನೆ, ಆದರೆ ಎದುರುದಾರನು ಅರ್ಜಿದಾರರಿಗೆ ನಿರ್ಲಕ್ಷ್ಯ ವಹಿಸಿರುತ್ತಾನೆ.

**8.** ಪಿ.ಡಬ್ಲೂ.1 ರವರು ತಮ್ಮ ವಿಚಾರಣೆಯಲ್ಲಿ ಮುಂದುವರೆದು 1 ನೇ ಅರ್ಜಿದಾರರು "ಶಾಂತ್ವನ ಮಹಿಳಾ ಸಹಾಯ ವಾಣಿ ಕೇಂದ್ರ ದೇವದುರ್ಗಾ" ರವರಿಗೆ ದಿನಾಂಕ 07-06-2021 ರಂದು ಎದುರುದಾರನು ತನ್ನೊಂದಿಗೆ ಹಾಜರಿರುವ ಬಗ್ಗ ದೂರು ನೀಡಿದ್ದಾರೆ. ಕುಟುಂಬ ಸಲಹೆಗಾರರಾದ ಶಾಂತವಾನ ಮಹಿಳಾ ಸಹಾಯ ವಾಣಿ ಕೇಂದ್ರ ದೇವದುರ್ಗ ಅವರ ಸಮ್ಮುಖದಲ್ಲಿ, ಎದುರುದಾರನು ದಿನಾಂಕ 12-06-2021 ರಂದು ಸಾಕ್ಷಿಗಳ ಸಮ್ಮುಖದಲ್ಲಿ ಅರ್ಜಿದಾರರಿಗೆ ರೂ.9,000/- ಜೀವನಾಂಶವನ್ನು ನೀಡಲು ಒಪ್ಪಿಕೊಂಡಿರುತ್ತಾನೆ. ಆದರೆ ಇಂದಿನವರೆಗೆ ಎದುರುದಾರನು ಅರ್ಜಿದಾರರಿಗೆ ಯಾವುದೇ ಮೊತ್ತವನ್ನು ಪಾವತಿಸಿಲ್ಲ. ಅರ್ಜಿದಾರರು ಮತ್ತೆ ಸೇರಲು ಮತ್ತು ಎದುರುದಾರನೊಂದಿಗೆ ವಾಸಿಸಲು ಸಿದ್ಧರಿದ್ದರೂ ಸಹ, ಎದುರುದಾರನು ಅರ್ಜಿದಾರನ್ನು ಸರಿಯಾಗಿ ನೋಡಿಕೊಂಡಿರುವುದಿಲ್ಲ. ಈ ಕುರಿತು ನಿಪಿ-8 ರಿಂದ 12 ರಂತೆ ಒಪ್ಪಂದದ ಪ್ರಮಾಣೀಕೃತ ಪ್ರತಿಯನ್ನು ನಿಪಿ-8 ರಿಂದ 12 ರಂತೆ ಹಾಜರು ಪಡಿಸಿರುತ್ತಾರೆ. ಎದುರುದಾರನು ಈಗಾಗಲೇ 2 ನೇ ಮದುವೆಯಾಗಿದ್ದಾರೆ ಎಂಬ ಅಂಶವನ್ನು 1 ನೇ ಅರ್ಜಿದಾರರ ತಿಳಿದಿದ್ದು, ಆಕೆಯ ಪೋಷಕರು ಎರಡನೇ ಮದುವೆಯ ಬಗ್ಗ ಎದುರುದಾರನ್ನು ಕೇಳಿದ್ದು, ಆದರೆ ಎದುರುದಾರನು ನಿರ್ಲಕ್ಷಿಸಿರುತ್ತಾನೆ ಮತ್ತು ಕಾಳಜಿ ವಹಿಸಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಪಿಡಬ್ಲ್ಯೂ-2 ಮತ್ತು 3 ರವರ ಪಿ.ಡಬ್ಲೂ 1 ರವರ ಸಾಕ್ಷಕ್ಕೆ ಪೂರಕ ಸಾಕ್ಷ ನುಡಿದಿರುತ್ತಾರೆ. ಪಿಡೂಬ್ಲ್ಯ 1 ರಿಂದ 3 ರವರ ಸಾಕ್ಷ್ಯ ಪರಿಶೀಲಿಸಿದಾಗ ಎದುರದಾರನು ಅರ್ಜಿದಾರರನ್ನು ಯಾವುದೇ ಸಕಾರಣವಿಲ್ಲದೆ ಮನೆಯಿಂದ ಹೊರ ಹಾಕಿ ಅವರ ಜೀವನ ನಿರ್ವಹಣೆಯನ್ನು ತೊರೆದಿರುತ್ತಾರೆ ಎಂದು ಸ್ಪಷ್ಟವಾಗಿ ಕಂಡುಬರುತ್ತದೆ. **ಆದ್ದರಿಂದ ಅಂಶ 1 ನ್ನು ಸಕಾರತ್ಮಾಕವಾಗಿ ಉತ್ತರಿಸಿರುತ್ತೇನೆ.**

**9. <u>ಅಂಶ – 2 ಮತ್ತು ಅಂಶ - 3 ಃ-</u>** ಈ ಎರಡು ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಸಾಕ್ಷಿ ವಿಚಾರಣೆಯ ಪುನಾರವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಏಕಕಾಲದಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ಎದುರುದಾರನು ಆದಾಯದ ಕುರಿತು ಪಿಡೂಬ್ಲ್ಯ-1 ರವರು ತಮ್ಮ ಸಾಕ್ಷ್ಯದಲ್ಲಿ ಎದುರುದಾರನು ಲಾರಿ ಚಾಲಕನಾಗಿ ಕೆಲಸ ಮಾಡುತ್ತಿದ್ದಾನೆ ಮತ್ತು ಅವರು ತಿಂಗಳಿಗೆ ರೂ. 30,000/- ಗಳಿಸುತ್ತಿದ್ದಾರೆ. 2 ಮತ್ತು 3 ನೇ ಅರ್ಜಿದಾರರು ಶಾಲೆಗಳಲ್ಲಿ ಓದುತ್ತಿದ್ದಾರೆ, ಶುಲ್ಕ ರೂ.20,000/- ವೆಚ್ಚದ ಸಂಪೂರ್ಣ

1ನೇ ಅರ್ಜಿದಾರರು ಕಟ್ಟಿರುತ್ತಾರೆ. ಎದುರುದಾರನು 1ನೇ ಅರ್ಜಿದಾರರಿಗೆ ರೂ. 10,000/- ಮತ್ತು 2 ಮತ್ತು 3ನೇ ಅರ್ಜಿದಾರರಿಗೆ ಪ್ರತಿ ತಿಂಗಳು ತಲಾ ರೂ. 5,000/- ಗಳನ್ನು ಪಾವತಿಸಲು ಬಾದ್ಯಸ್ಥದ್ದಾಗಿರುತ್ತಾನೆ. ತನ್ನ ಉಪಜೀವನಕ್ಕೆ ತಿಂಗಳಿಗೆ 20 ಸಾವಿರ ಬೇಕಾಗಿರುತ್ತದೆ. ಅಷ್ಟು ಹಣ ಪಾವತಿಸುವ ಶಕ್ತಿ ನನ್ನ ಗಂಡನಿಗೆ ಇದೆ ಎಂದು ತಿಳಿಸಿರುತ್ತಾರೆ. ಆದರಿಂದ ಎದುರುದಾರನಿಗೆ ಸಾಕಷ್ಟು ಆದಾಯ ಬರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಎದುರುದಾರನ ಖಚಿತ ವರಮಾನದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ಎದುರದಾರರು ಅರ್ಜಿದಾರರಳ ಅರ್ಜಿಯಲ್ಲಿರುವ ಸಂಗತಿಗಳನ್ನು ಅಲ್ಲಗಳೆಯಲು ನ್ಯಾಯಾಲಯಕ್ಕೆ ಹಾಜರಾಗಿ ಯಾವುದೇ ರೀತಿಯ ತಕರಾರನ್ನಾಗಲೀ ಮೌಖಿಕ ಸಾಕ್ಷ್ಯಧಾರಗಳನ್ನಾಗಲಿ ಹಾಜರುಪಡಿಸಿರುವುದಿಲ್ಲ. ಆದರಿಂದ ಅರ್ಜಿದಾರರು ಸದರಿ ಅರ್ಜಿ ಸಲ್ಲಿಸುವ ಕಾಲಕ್ಕೆ ಎದುರುದಾರರ ವಯಸ್ಸು 41 ವರ್ಷಗಳಾಗಿದ್ದು, ಸದರಿಯವರು ವಯಸ್ಕರಾಗಿರುತ್ತಾರೆಂದು ಅವರಿಗೆ ದುಡಿಯಲು ಶಕ್ತಿ ಇದೆ ಮತ್ತು ಸಾಕಷ್ಟು ಆದಾಯ ಹೊಂದುತ್ತಾರೆ ಎಂದು ಪರಿಗಣಿಸಿ ಅರ್ಜಿದಾರರು ಕೇಳಿರುವ ಜೀವನಾಂಶದ ಹಣ ಕೊಡಲು ಎದುರುದಾರರು ಸಮರ್ಥರಿರುವುದಾಗಿ ಪರಿಗಣಿಸಿ, ಅರ್ಜಿದಾರರ ಗೌರವಯುತ ಉಪಜೀವನಕ್ಕಾಗಿ 1ನೇ ಅರ್ಜಿದಾರರಿಗೆ ಮಾಸಿಕ ರೂ.3,000/- ಗಳನ್ನು ಮತ್ತು 2 ಮತ್ತು 3ನೇ ಅರ್ಜಿದಾರರಿಗೆ ಮಾಸಿಕ ತಲಾ ರೂ.2,500/- ಗಳನ್ನು ಜೀವನಾಂಶ ನೀಡುವುದು ಸೂಕ್ತವೆಂದು ಕಂಡುಬರುತ್ತದೆ. ಆದ್ದರಿಂದ ಮೇಲ್ಕಂಡ **ಅಂಶ 2 ನ್ನು ಸಕಾರತ್ಮಕವಾಗಿ ಹಾಗ 3 ನ್ನು ಭಾಗಶಃ ಸಕಾರತ್ಮಕವಾಗಿ ಉತ್ತರಿಸುತ್ತಿದ್ದೇನೆ.**

10. **ಅಂಶ 4 ಃ-** **ಮೇಲ್ಕಂಡ ಅಂಶಗಳಿಗೆ ಉತ್ತರಿಸಿರುವಂತೆ ಅಂತಿಮ ಆದೇಶ ಕೆಳಕಂಡಂತಿರುತ್ತದೆ.**

**ಃಃ ಆದೇಶ ಃಃ**

ಅರ್ಜಿದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 125 ರಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಭಾಗಶಃ ಪುರಸ್ಕರಿಸಲಾಗಿದೆ.

ಎದುರುದಾರರು 1ನೇ ಅರ್ಜಿದಾರರಿಗೆ ಮಾಸಿಕ ರೂ.3,000/- ಗಳನ್ನು ಅರ್ಜಿ ಸಲ್ಲಿಸಿದ ದಿನಾಂಕದಿಂದ ಸದರಿ ಅರ್ಜಿದಾರರ ಜೀವಿತಾವದಿಯವರೆಗೂ ಅಥವಾ ಅವರು ಮರುವಿವಾಹವಾಗುವವರೆಗೂ ಪಾವತಿಸಲು ಆದೇಶಿಸಿದೆ.

ಎದುರುದಾರರು 2 ಮತ್ತು 3ನೇ ಅರ್ಜಿದಾರರಿಗೆ ಮಾಸಿಕ ತಲಾ ರೂ.2,500/- ಗಳನ್ನು ಅರ್ಜಿ ಸಲ್ಲಿಸಿದ ದಿನಾಂಕದಿಂದ ಸದರಿ ಅರ್ಜಿದಾರರು ವಯಸ್ಕರರಾಗುವವರೆಗೂ ಪಾವತಿಸಲು ಆದೇಶಿಸಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶವಿರುವುದಿಲ್ಲ.

(ಉಕ್ತಲೇಖನವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿಯೇ **ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಿದ್ದಿ, ಸಹಿ, ಮಾಡಿ ನಂತರ ಇಂದು ದಿನಾಂಕ 26ನೇ** ಮಾರ್ಚ್ **2026 ರಂದು ಮುಕ್ತ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು**)

(ಶ್ರೀ **ರಫೀಕ ಅಹ್ಮದ**)
**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.**
**ದೇವದುರ್ಗ.**

**:: ಅನುಬಂಧ ::**

**ಅರ್ಜಿದಾರರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :**

ಪಿಡಬ್ಲ್ಯು **-1** :: ನಾಜೀಯಾ ಬೇಗಂ.

ಪಿಡಬ್ಲ್ಯು **-2** :: ಶಫಿ.

ಪಿಡಬ್ಲ್ಯು **-3** :: ಫಾತಿಮಾ.

**ಅರ್ಜಿದಾರರ ಪರವಾಗಿ ಗುರುತಿಸಲಪಟ್ಟಿರುವ ದಾಖಲೆಗಳು :**

ನಿಪಿ-**1** ರಿಂದ **5** :: ಆಧಾರಕಾರ್ಡುಗಳು.

ನಿಪಿ-**6** ಮತ್ತು **7** :: ಧೃಡಿಕರಣ ಪ್ರಮಾಣ ಪತ್ರಗಳು.

ನಿಪಿ-**8** :: ತಕಾರರು ಪತ್ರ.

ನಿಪಿ-**9** :: ಒಪ್ಪಿಗೆ ಪತ್ರ.

ನಿಪಿ-**10** :: ನೆರಳಚ್ಚು ಛಾಯಚಿತ್ರ.

ನಿಪಿ-**11** :: ಮಹಿಳಾ ಸಹಾಯವಾಣಿ ಕೇಂದ್ರದ ಅರ್ಜಿ.

ನಿಪಿ-**12** :: ನೋಟಿಸ್.

**ಎದರುದಾರರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು : :**

ಏನು ಇಲ್ಲ.

**ಎದರುದಾರರ' ಪರವಾಗಿ ಗುರುತಿಸಲಪಟ್ಟಿರುವ ದಾಖಲೆಗಳು :**

ಏನು ಇಲ್ಲ.

Digitally signed by RAFEEQ AHMED M

Location: Civil Judge and JMFC Devadurga

(ಶ್ರೀ ರಫೀಕ ಅಹ್ಮದ್)
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,.
ದೇವದುರ್ಗ.